ಬರತಕ್ಕ ಜಿಲ್ಲೆಯಲ್ಲಿ ಮಾಡಲಿಕ್ಕೆ ಯೋಗ್ಯವಾಗಿದೆ ಎಂಬುದನ್ನು ಪರಿಶೀಲಿಸಿ ವರದಿ ಕೊಡುವಂತೆ ಅವರಲ್ಲಿ ನಾನು ವಿನಂತಿಮಾಡಿಕೊಳ್ಳುತ್ತೇನೆ. ಅನಂತರ ಸರ್ಕಾರ ಒಂದು ನಿರ್ಣಯವನ್ನು ಅದರ ಬಗ್ಗೆ ತೆಗೆದುಕೊಳ್ಳುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಲಿಯಿರುವ ಮುಖ್ಯೋಪಾಧ್ಯಾಯರುಗಳ ಹುದ್ದೆಗಳು

1127 - ಶ್ರೀ ಜಿ.ಎಸ್. ಆಚಾರ್ (ಬೈಂದೂರು) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರಕಾರಿ ಪ್ರಾಥಮಿಕ ಶಾಲೆ, ಪ್ರೌಢ ಶಾಲೆ ಕಿರಿಯ ಮಹಾವಿದ್ಯಾಲಯ, ಪದವಿ ಮಹಾವಿದ್ಯಾಲಯಗಳ ಅಧ್ಯಾಪಕರ ಉಪನ್ಯಾಸಕರ ಸ್ಥಾನ ಎಷ್ಟು ಖಾಲಿ ಇವೆ?

ಆ) ಮುಖ್ಯೋಪಾಧ್ಯಾಯರು ಪ್ರಾಂಶುಪಾಲರ ಸ್ಥಾನ ಎಷ್ಟು ಖಾಲಿ ಇದೆ?

ಇ) ಮಂಜೂರಾದ ಹುದ್ದೆಗಿಂತಲೂ ಜಾಸ್ತಿ ಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹೆಚ್ಚಿನ ಹುದ್ದೆಗಳನ್ನು ತುಂಬಲು ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) :

ಅ) ಪ್ರಾಥಮಿಕ ಶಿಕ್ಷಕರು 427

ಪ್ರೌಢಶಾಲೆ ಶಿಕ್ಷಕರು 223

ಕಿರಿಯ ಕಾಲೇಜು ಉಪನ್ಯಾಸಕರು 87

ಕಾಲೇಜು ಉಪನ್ಯಾಸಕರು 1

ಆ) ಪ್ರೌಢ ಶಾಲಾ ಮುಖ್ಯೋಪಾಧ್ಯಾಯರು 42

ಕಿರಿಯ ಕಾಲೇಜು ಪ್ರಾಂಶುಪಾಲರು 8

ಇ) ಬಂದಿದೆ.

ಈ) ರಾಜ್ಯದಲ್ಲಿರುವ ಎಲ್ಲಾ ಶಾಲಾ ಕಾಲೇಜುಗಳ ಹೆಚ್ಚಿನ ಹುದ್ದೆ ಮಂಜೂರು ಮಾಡುವ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸುತ್ತಿದೆ.

ಶ್ರೀ ಜಿ.ಎಸ್. ಆಚಾರ್: ಮಾನ್ಯ ಅಧ್ಯಕ್ಷರೆ, ಹಿಂದೆ ಒಂದು ಕಾಲಕ್ಕೆ ಕರ್ನಾಟಕ ರಾಜ್ಯದಲ್ಲಿ ಶಿಕ್ಷಣ ರಂಗದಲ್ಲಿ ಪ್ರಥಮ ಶ್ರೇಣಿಯಲ್ಲಿದ್ದ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ವರ್ಷಗಳಿಂದ ಖಾಲಿ ಹುದ್ದೆಗಳನ್ನು ತುಂಬದೆ, ಅವಶ್ಯಕವಾಗಿ ಬೇಕಾದಂಥ ಹುದ್ದೆಗಳನ್ನು ಮಂಜೂರು ಮಾಡದೆ ಇರುವ ಕಾರಣದಿಂದಾಗಿ ಈಗ 788 ಹುದ್ದೆಗಳು ಖಾಲಿ ಇವೆ. ಇದು ಹಿಂದಿನ ಮಂಜೂರಾತಿಯ ಪ್ರಕಾರ. ಈ 788 ಸ್ಥಾನಗಳನ್ನು ಭರ್ತಿ ಮಾಡಲಿಕ್ಕೆ ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ? ಇದರಲ್ಲಿ ಫಸ್ಟ್ ಗ್ರೇಡ್ ಕಾಲೇಜುಗಳು ಪ್ರಿನ್ಸಿಪಾಲರ ಹುದ್ದೆಗಳು ಬಿಟ್ಟು ಹೋಗಿವೆ. ಇದನ್ನೂ ಸೇರಿಸಿದರೆ ಸುಮಾರು 800 ಹುದ್ದೆಗಳಾಗಬಹುದು. ಇಷ್ಟನ್ನೂ ಭರ್ತಿಮಾಡಲು ಯಾವಾಗ ಕ್ರಮ ತಗೆದುಕೊಳ್ಳುತ್ತೀರಿ? ಹಿಂದಿನ ಅವಶ್ಯಕತೆಯ ಆಧಾರದಮೇಲೆ ಭರ್ತಿ ಮಾಡುವುದು ಅಲ್ಲದೆ ಇವತ್ತಿನ ಅವಶ್ಯಕತೆಯ ಪ್ರಕಾರ ಟೀಚರ್-ಪೀಪಲ್ ರೇಷಿಯೋ ಪ್ರಕಾರ ಅಗತ್ಯ ಇರತಕ್ಕ ಸ್ಥಾನಗಳನ್ನು ಭರ್ತಿ ಮಾಡುತ್ತೀರಾ? ಮಾನ್ಯ ಶಿಕ್ಷಣ ಮಂತ್ರಿಗಳು ದಕ್ಷಿಣ ಕನ್ನಡದವರೇ ಆಗಿದ್ದು ಅವರು ಇಡೀ ಕರ್ನಾಟಕ ರಾಜ್ಯವನ್ನೇ ನೋಡಿಕೊಳ್ಳುವ ಜವಾಬ್ದಾರಿ ಇದ್ದರೂ ಸಹ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಸ್ಥಾನಮಾನಕ್ಕೆ ಭಂಗ ಬಾರದಂತೆ ಹಿಂದಿನ ಮೇಲ್ಪಾಲು ಯಾವುದು ಇದೆ ಅದನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನಮಾಡುತ್ತಾರೆಯೆ? ಎಂಬುದನ್ನು ಕೇಳಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ. ಪ್ರೌಢಶಾಲೆಗಳಲ್ಲಿ 31-3-91 ರಲ್ಲಿ ಇರತಕ್ಕ 223 ಸಹ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳನ್ನು ಮುಂದೆ ಇರತಕ್ಕ ಅಕಡೆಮಿಕ್ ವರ್ಷದೊಳಗೆ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳುತ್ತೇನೆ. ಇನ್ನು ಇಡೀ ಕರ್ನಾಟಕ ರಾಜ್ಯದಲ್ಲಿ 400 ಜೂನಿಯರ್ ಕಾಲೇಜುಗಳ ಉಪನ್ಯಾಸಕರನ್ನು ನೇಮಕ ಮಾಡುವುದಕ್ಕೆ ಈಗಾಗಲೇ ಕ್ರಮವನ್ನು ತೆಗೆದುಕೊಂಡು ಪಟ್ಟಿ ಕೂಡ ತಯಾರಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಅಭ್ಯರ್ಥಿಗಳ ವೆರಿಫಿಕೇಷನ್‌ಗೂ ಕ್ರಮ ತೆಗೆದುಕೊಂಡಿದೆ. ಇಡೀ ಕರ್ನಾಟಕ ರಾಜ್ಯದಲ್ಲಿ ಸುಮಾರು 400 ಪದವಿ ಪೂರ್ವ ಕಾಲೇಜುಗಳಿಗೆ ಉಪನ್ಯಾಸಕರನ್ನು ಬರುವ ಜೂನ್ ತಿಂಗಳೊಳಗೆ ತುಂಬತಕ್ಕ ಕೆಲಸವನ್ನು ನಾವು ಮಾಡುತ್ತೇವೆ.

ಇನ್ನು ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರತಕ್ಕಂತಹ ಶಿಕ್ಷಕರ ಹುದ್ದೆಗಳನ್ನು ತುಂಬಲು ನಾವು ಈಗಾಗಲೇ ಕರ್ನಾಟಕ ಲೋಕಸೇವಾ ಆಯೋಗದವರಿಗೆ ಬರೆದಿದ್ದೇವೆ, ಅದು ಅವರು ಮಾಡತಕ್ಕ ಕೆಲಸ. ಅವರಿಂದ ಈ ಬಗ್ಗೆ ಆಯ್ಕೆಯ ವಿಚಾರದಲ್ಲಿ ಕಾರ್ಯಕ್ರಮಾವಾದ ಕೂಡಲೆ ನಾವು ಆ ಹುದ್ದೆಗಳನ್ನು ತುಂಬಲು ಹಣದ ವ್ಯವಸ್ಥೆಯಲ್ಲಿ ತೊಂದರೆ ಇದ್ದರೂ ಕೂಡ ಉಪಧ್ಯಾಯರ ಅಥವಾ ಉಪನ್ಯಾಸಕರ ಹುದ್ದೆಯನ್ನು ತುಂಬಲು ಈ ಹೆಚ್ಚು ತೊಂದರೆ ಇರಬಾರದು ಎಂದು ಈಗಾಗಲೇ ಹಣಕಾಸಿನ ಇಲಾಖೆಯವರಿಗೆ ಹೇಳಿದ್ದೇವೆ. ಇನ್ನು ಮುಖ್ಯೋಪಾಧ್ಯಾಯರ ವಿಚಾರದಲ್ಲಿಯೂ ಅಷ್ಟೇ, ತಮಗೆ ಗೊತ್ತಿರುವಂತೆ, ಇದರಲ್ಲಿ ಶೇಕಡಾ 50ರಷ್ಟು ಹುದ್ದೆಗಳಿಗೆ ನೇರವಾಗಿ ನೇಮಕಾತಿ ಮಾಡಬೇಕು, ಉಳಿದ 50ರಷ್ಟನ್ನು ಪ್ರಮೋಶನ್ ಮೂಲಕ ಮಾಡಬೇಕು. ನಾವು ಈ 50ರಷ್ಟು ಹುದ್ದೆಗಳಿಗೆ ಪ್ರಮೋಷನ್ ಮೂಲಕ ತುಂಬಲು ಈಗಾಗಲೆ ಗ್ರೆಡೇಶನ್ ಪಟ್ಟಿಯನ್ನು ತಯಾರು ಮಾಡುತ್ತಿದ್ದೇವೆ. ನೇರ ನೇಮಕಾತಿಯನ್ನು ಕರ್ನಾಟಕ ಲೋಕಸೇವಾ ಆಯೋಗದವರು ಮಾಡಬೇಕು, ಮುಂದಿನ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಮೊದಲು ಮುಖ್ಯೋಪಾಧ್ಯಾಯರ ಹುದ್ದೆಗಳನ್ನು ಭರ್ತಿಮಾಡಲಿಕ್ಕೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಜೆ.ಎಸ್. ಆಚಾರ್: ಮಾನ್ಯ ಅಧ್ಯಕ್ಷರೆ, ಮುಖ್ಯವಾಗಿ ಪ್ರೌಢಶಾಲೆಗಳಲ್ಲಿ ಮಂಜೂರಾಗಿರುವ ಹುದ್ದೆಗಳು ಬಹಳಷ್ಟು ಖಾಲಿ ಇದ್ದು, ಮುಖ್ಯೋಪಾಧ್ಯಾಯರೂ ಇಲ್ಲದೆ, ಖಾಯಂ ಶಿಕ್ಷಕರೂ ಇಲ್ಲದೆ, ತಾತ್ಕಾಲಿಕವಾದ ವ್ಯವಸ್ಥೆಯನ್ನು ಮಾಡಿಕೊಂಡು ಹೋಗುತ್ತಿರುವುದು ಇದೆ. ಅಂಥಾದ್ದರಲ್ಲಿ ಆದಷ್ಟು ಬೇಗ ಇದನ್ನು ಪರಿಗಣನೆಗೆ ತೆಗೆದುಕೊಂಡು ನೇಮಕ ಮಾಡಬೇಕು. ಎರಡನೆಯದಾಗಿ ಮಿತ ವೇತನ ಪದವೀಧರರನ್ನು ಖಾಯಂಗೊಳಿಸಲು ಸರ್ಕಾರ ಕ್ರಮ ಕೈಗೊಂಡಿದೆ. ಇದರಲ್ಲಿ ಎಷ್ಟೋ ಜನರು ಬಿ.ಎಡ್ ಪದವೀಧರರಿದ್ದಾರೆ. ಅಂತಹವರನ್ನು ಇವತ್ತು ಬೇರೆ ಪೋಸ್ಟ್‌ಗೆ ಹಾಕುತ್ತಿದ್ದಾರೆ. ಪ್ರೌಢ ಶಾಲೆಗಳ ಶಿಕ್ಷಕರನ್ನಾಗಿ ನೇಮಕ ಮಾಡುವ ಬದಲು ಸರ್ಕಾರದ ಇನ್ನಿತರ ಇಲಾಖೆಗಳಿಗೆ ಹಾಕುತ್ತಿದ್ದಾರೆ, ಅಂತಹವರನ್ನು ತೆಗೆದುಕೊಳ್ಳಬಹುದು. ಏಕೆಂದರೆ ಅವರು ಹಿಂದೆ ಸ್ಪೈಫಂಡರಿ ಬೇಸಿನ್‌ನಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದವರು. ಅವರನ್ನು ಖಾಯಂ ಗೊಳಿಸುವುದು ಎಂದು ಸರ್ಕಾರದ ತೀರ್ಮಾನ ಮಾಡಿದೆ. ಹಾಗೆ ಮಾಡುವಾಗ ಶಿಕ್ಷಣ ಇಲಾಖೆಯಲ್ಲಿಯೇ ಅವರನ್ನು ಭರ್ತಿಮಾಡುವುದು ಒಳ್ಳೆಯದಲ್ಲವೇ ಎಂದು ನಾನು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ಸೂಚನೆಯ ಬಗ್ಗೆ ಸರ್ಕಾರ ಅಲೋಚನೆ ಮಾಡುತ್ತದೆ.

ಗ್ರಾಮಾಂತರ ಶಾಲೆಗಳಲ್ಲಿ ಶಿಕ್ಷಕರ ಕೊರತೆ

1225 - ಪ್ರೊ. ಎಂ.ಡಿ. ನಂಜುಡಸ್ವಾಮಿ (ಧಾರವಾಡ ಗ್ರಾಮಾಂತರ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?